# CCE PF

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2015**

**S. S. L. C. EXAMINATION, MARCH / APRIL, 2015**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 10. 04. 2015 ] ಸಂಕೇತ ಸಂಖ್ಯೆ : **62-K**

Date : 10. 04. 2015 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಖಾಸಗಿ ಅಭ್ಯರ್ಥಿ / Private Fresh )**

[ ಪರಮಾವಧಿ ಅಂಕಗಳು : 100

[ Maximum Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಒಂದು ರಿಟರ್ನ್ ಟಿಕೇಟು ಮತ್ತು ಎರಡು ಡಾಲರು ಇದ್ದವು. | |
| 2. | ಬೆಂಗಳೂರಿನ ಯಂಗ್ ಕ್ರಿಕೆಟರ್ಸ್ ಸಂಸ್ಥೆಯಲ್ಲಿ ಕಲಿತರು. | |
| 3. | ಕವಿ ಭಾವನೆ ಮೌನತಾಳಿ ಮೂಕವಾಯಿತು. | |
| 4. | ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕೆಟ್ ದೊರೆಯಿತು. | |
| 5. | ಭಾರತೀಯ ಕ್ರಿಕೆಟ್ ತಂಡಕ್ಕೆ 1990 ರಲ್ಲಿ ಕುಂಬ್ಳೆ ಆಯ್ಕೆಯಾದರು. | |
| 6. | ಸರದಾರನ ಹೆಸರು ಬೆಳವಡಿ ಶಾಂತಯ್ಯ. | |
| 7. | ನಾವು–ನೀವು, ಅವರು–ಇವರು, ಭಾರತೀಯರೆಲ್ಲ ಒಂದೇ ಎಂದಿದ್ದಾರೆ. | |
| 8. | ಅಕ್ಷರವೆಂಬ ಮಾಯಾದೀಪ ಉಜ್ಜಿದರೆ 'ಸರ್ವಶಕ್ತದೂತ' ಅವತರಿಸುತ್ತಾನೆ ಎಂದಿದ್ದಾರೆ. | |
| 9. | ಕಷ್ಟ ಸಹಿಷ್ಣುಗಳು ಮತ್ತು ಸಾಹಸ ಪ್ರಿಯರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ವಿನಯವಿಲ್ಲದವನು ಮಗನಲ್ಲ ಎಂದಿದ್ದಾರೆ. | |
| 11. | ಕನ್ನಡ ರಾಜ್ಯವನ್ನು ವರ್ಣಿಸಿದ ದೊರೆ ನೃಪತುಂಗ. | |
| 12. | ರಾಮಸಿಂಗ್ ಮೋಹನಪುರದ ಒಬ್ಬ ಉತ್ಸಾಹಿ ತರುಣ. | |
| 13. | ಬಡತನಕ್ಕೆ ಉಣ್ಣುವ ಚಿಂತೆ ಎಂದಿದ್ದಾರೆ. | |
| 14. | ನಾವು ನಿತ್ಯ ನಮ್ಮ ಮನವನ್ನು ಶೋಧಿಸಬೇಕು ಎಂದಿದ್ದಾರೆ. | |
| 15. | 'ಹೀಗೊಂದು ಟಾಪ್ ಪ್ರಯಾಣ' ಲಲಿತ ಪ್ರಬಂಧದ ಲೇಖಕ ಈರಪ್ಪ ಎಂ. ಕಂಬಳಿ. | |
| 16. | ಒಂದೇ ದಿನ ಪ್ರತಿ ತಂಡವು ಒಮ್ಮೆಗೆ 50 ಓವರ್‌ಗಳ ಅವಧಿ ಆಡುವ ಪಂದ್ಯ. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :** | $13 \times 2 = 26$ |
| 17. | ದೀಪ ಹೋತ್ತಿದ ಮೇಲೆ ಅಮೇರಿಕಾದ ಮಿನಿ ಪೊಲೀಸ್ ನಗರದಲ್ಲಿ ಸುತ್ತಿದಾಗ ಬಣ್ಣ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು ಅಲಂಕೃತ ದೀಪರಾಶಿಗಳನ್ನು ನೋಡಿದರು. | |
| 18. | ಕುಂಬ್ಳೆಯವರು ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಬೆಂಗಳೂರು ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರು. ಐ.ಪಿ.ಎಲ್. ಕ್ರೀಡಾಸ್ಪರ್ಧೆಯ ೨ನೇ ವರ್ಷವೇ ಸ್ವತಃ ಅತಿ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರ್ ಎಂಬ ಹಿರಿಮೆ ಪಡೆದರು. ೩ನೇ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತೀ ಇವರದ್ದಾಗಿದೆ. | |
| 19. | ಕನ್ನಡ ಭಾಷೆಯ ಒಳಸತ್ವವನ್ನು ಚಿಮ್ಮಿಸಿದವರು ನಾ. ಕಸ್ತೂರಿ, ಕೈಲಾಸಂ, ರಾಶಿ, ವೈ.ಎನ್.ಕೆ. ಲಾಂಗೂಲಾಚಾರ್ಯ ಮೊದಲಾದವರು. ಪದಗಳಿಗೆ ರೂಢಿಯ ಅರ್ಥಗಳನ್ನಲ್ಲದೆ ನಾನಾರ್ಥ ಬರುವಂತೆ ಬಳಸಿ ಕನ್ನಡದ ಸತ್ವವನ್ನು ಚಿಮ್ಮಿಸಿದ್ದಾರೆ. | |
| 20. | ರಾಮಸಿಂಗ್ ಒಬ್ಬ ಉತ್ಸಾಹಿ ತರುಣ. ಇವರ ತಂದೆ ಸಹ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದರು. ಇಂತಹವರ ಮಗನು ಸ್ವಾತಂತ್ರ್ಯಕ್ಕಾಗಿ ತನ್ನನ್ನು ಅರ್ಪಿಸಲು ಹೊರಟಾಗ ತಾಯಿ ತುಳಜಾಬಾಯಿ ಸ್ಫೂರ್ತಿ ತುಂಬಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿದಳು. | |
| 21. | ಆಶು ನಾಟಕವೆಂದರೆ ಸ್ಥಳದಲ್ಲೇ ಕಥೆ, ಪಾತ್ರಗಳು ಮತ್ತು ಮಾತುಗಳನ್ನು ನಿರ್ಧರಿಸಿ ಆಡುವ ನಾಟಕಗಳಾಗಿವೆ. ಮಾತುಗಳನ್ನು ಸ್ವಂತವಾಗಿ ಅಭಿವ್ಯಕ್ತಿಪಡಿಸುವ ಮತ್ತು ಕ್ಷಿಪ್ರವಾಗಿ ಆಡುವ ನಾಟಕಗಳನ್ನು ಆಶುನಾಟಕವೆನ್ನುತ್ತಾರೆ. ನಾ. ಕಸ್ತೂರಿಯವರು ಕಾಲೇಜು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನೊಳಗೊಂಡು ಆಶುನಾಟಕ ಪ್ರದರ್ಶಿಸುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ವ್ಯಕ್ತಿಯು ನೀತಿವಂತನಾಗಿರಬೇಕು. ಪರಮಾತ್ಮನು ನೀತಿವಂತನಾದ ವ್ಯಕ್ತಿಯನ್ನು ಸನ್ಮಾರ್ಗದಲ್ಲಿ ನಡೆಸಿ ಮುಕ್ತಿಯನ್ನು ಅಂದರೆ ಜೀವನದಲಿ ಯಶಸ್ಸನ್ನು ಕರುಣಿಸುವನು ಎಂದು ಪುರಂದರದಾಸರು ಹೇಳಿದ್ದಾರೆ. | |
| 23. | ಭೂಮಿಯನ್ನು ಸದಾ ರಕ್ಷಿಸುತ್ತಿರುವ ಮಳೆ ಇಲ್ಲದೆ ಭೂಮಿ ಒಣಗಿ ಹೋಗಿದೆ. ನೀರಿಲ್ಲದೆ ದನಕರುಗಳು ಸೊರಗಿ ದಂಟಿನಂತಾಗಿವೆ. ನಮ್ಮೆಲ್ಲರ ತಂದೆಯಾದ ಓ ಮಳೆಯೇ ನೀನು ಕರುಣೆ ತೋರು ಎಂದು ರೈತನು ಮಳೆರಾಯನನ್ನು ಬೇಡಿಕೊಳ್ಳುತ್ತಾನೆ. | |
| 24. | ನಾವು ಮನಸ್ಸನ್ನು ಶುದ್ಧವಾಗಿರಿಸಲು ಸದಾ ಮನಸ್ಸನ್ನು ಶೋಧಿಸುತ್ತಿರಬೇಕು. ನಮ್ಮಲ್ಲಿರುವ ಪಾಪ–ಪುಣ್ಯ ಧರ್ಮ ಅಧರ್ಮ ಇವುಗಳನ್ನು ಪರಿಶೋಧಿಸಿ ಒಳ್ಳೆಯದನ್ನು ಉಳಿಸಿ ಕೆಟ್ಟದುದನ್ನು ದೂರೀಕರಿಸಬೇಕು. ಒಳ್ಳೆಯ ನಡವಳಿಕೆಯ ಮೂಲಕ ಶುದ್ಧ ಜೀವನ ನಡೆಸಬೇಕು ಎಂದಿದ್ದಾರೆ. | |
| 25. | ರೈತನು ಮಳೆಯ ಬರುವಿಕೆಗಾಗಿ ಕಾಯುತ್ತಿರುತ್ತಾನೆ. ಮೂಡಣದಲ್ಲಿ ಮೋಡ ಮೂಡಿದುದನ್ನು ಕಂಡು ರೈತನು ಸಂಭ್ರಮಿಸುತ್ತಾನೆ. ಶುಭ್ರ ಗೋಡೆಗೆ ಬಣ್ಣ ಬಳಿದಂತೆ ಕಂಡ ಮೋಡವನ್ನು ಅತ್ಯಂತ ಆನಂದದಿಂದ ಸ್ವಾಗತಿಸುತ್ತಾನೆ. | |
| 26. | ಮಾಹಾ ಶಿಲ್ಪಿಯಾದ ವಿಶುವಿಗೆ 'ದೇವಾಲಯದ ಕಲಶವನ್ನು ನಾನು ನಿಲ್ಲಿಸಬಲ್ಲೆ. ಅನುಮಾನ ಬೇಡ. ಅವಕಾಶಕೊಟ್ಟು ನೋಡಿ. ಪ್ರಯತ್ನಕ್ಕೆ ಜಯ ಖಂಡಿತ. ನಿಮ್ಮ ನಿಟ್ಟುಸಿರು ನೀಗುವಂತೆ ಮಾಡುತ್ತೇನೆ. ದಯಮಾಡಿ ಅಲಕ್ಷಿಸಬೇಡಿ' ಎಂದು ಧರ್ಮಪದನು ಆಶ್ವಾಸನೆ ನೀಡಿದನು. | |
| 27. | ದೇಶದಲ್ಲಿರುವ ಜನರ ಸ್ವಭಾವ ಮತ್ತು ಚಹರೆ ಬೇರೆ ಬೇರೆಯಾಗಿದ್ದರೂ ನಮಗೆ ಆಶ್ರಯ ನೀಡಿರುವ ಭೂಮಿತಾಯಿಯ ಬಸಿರು ಒಂದೇ ಆಗಿದೆ. ಕಳಸ, ಶಿಲುಬೆ, ಮಿನಾರ್ ಹೀಗೆ ಹಿಂದೂ, ಕ್ರೈಸ್ತ, ಮುಸಲ್ಮಾನ ಧರ್ಮಗಳ ಪೂಜಿಸುವ ಸ್ಥಳ ಬೇರೆ ಬೇರಯಾದರೂ ಧರ್ಮಗಳ ಉಸಿರು ಒಂದೇ ಆಗಿದೆ ಎಂದು ಕವಿ ಹೇಳಿದ್ದಾರೆ. | |
| 28. | ಲಾಕಪ್ಪಿನಲ್ಲಿ ಒಳ್ಳೆಯ ಗಾಳಿ, ಬೆಳಕು, ಸ್ವಚ್ಛವಾದ ಹಾಸಿಗೆ ವಾರಕ್ಕೆರಡುಬಾರಿ ಕ್ರಿಮಿನಾಶಕಗಳ ಸಿಂಪಡಣೆ ಮುಂತಾದ ಸೌಲಭ್ಯಗಳಿವೆ ಎಂದು ಪೊಲೀಸನು ಲೇಖಕರಿಗೆ ಹೇಳಿದನು. | |
| 29. | ಮಕ್ಕಳಿಗೆ ಅಕ್ಷರ ಜ್ಞಾನ ಪ್ರಮುಖವಾದುದು. ಅಕ್ಷರ ವಿದ್ಯೆಯನ್ನು ಕಲಿಸದಿದ್ದರೆ ಅವರನ್ನು ಕೊಂದ ಹಾಗೆ. ಲಕ್ಷ ಧನವಿದ್ದರೂ ಅಕ್ಷರ ಜ್ಞಾನವಿಲ್ಲದಿದ್ದರೆ ಅವರು ನಾಶ ಹೊಂದುತ್ತಾರೆ. ಆದರೆ ಚಿಕ್ಕಂದಿನಲ್ಲಿ ಕಲಿತ ವಿದ್ಯೆಯು ಅವರನ್ನು ಜೀವನ ಪರ್ಯಂತ ಪೋಷಿಸುತ್ತದೆ. ದೇಶ ವಿದೇಶ ಸುತ್ತಿ ಧನ, ಗೌರವ ಮನ್ನಣೆ ಸಂಪಾದಿಸಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ | 1 ಅಂಕ |
| | ಸಂದರ್ಭ ವಿವರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 30. | "ಹೆಣ್ಣು ಮಗಳೇ, ಈ ಧ್ವಜವನ್ನು ಮೊದಲು ಕೆಳಗಿಡು."<br>*ಪಾಠ* : ಧ್ವಜ ರಕ್ಷಣೆ<br>*ಲೇಖಕರು* : ಪ್ರೊ. ಎಸ್.ಆರ್. ರೋಹಿಡೇಕರ್<br>*ಸಂದರ್ಭ* : ಈ ಮಾತನ್ನು ಕುಲಕರ್ಣಿ ತುಳಜಾಬಾಯಿಗೆ ಹೇಳುತ್ತಾನೆ. ತುಳಜಾಬಾಯಿಯ ಮಗ ರಾಮ್‌ಸಿಂಗ್ ಗುಂಡುತಗುಲಿ ಸಾವನ್ನಪ್ಪಿದಾಗ ಕೈಲಿದ್ದ ಧ್ವಜವನ್ನು ಕಸಿದುಕೊಂಡದ್ದನ್ನು ಕಂಡ ತಾಯಿ ಮಗನಿಗೆ ಧ್ವಜವನ್ನಿತ್ತು ಮಗನ ಮೇಲೆ ಹೊರಳುತ್ತಿದ್ದ ಸಂದರ್ಭದಲ್ಲಿ ಆಡಿದ ಮಾತುಗಳಿವು. | |
| 31. | "ಮೌನ ಧ್ಯಾನ ನಿನಗೆ ಊನ ಕುಕಿಲ ಜಾಣ ಕೋಗಿಲೆ"<br>*ಪದ್ಯ* : ಕೋಗಿಲೆ<br>*ಲೇಖಕರು* : ಚೆನ್ನವೀರ ಕಣವಿ<br>*ಸಂದರ್ಭ* : ಈ ಸಾಲನ್ನು ಕವಿ ಕೋಗಿಲೆ ಕುರಿತು ಹೇಳುತ್ತಾರೆ. ಮೌನದಲ್ಲಿರುವುದು ಕೋಗಿಲೆಗೆ ಭೂಷಣವಲ್ಲ. ಕೋಗಿಲೆ ತನ್ನ ಮಧುರವಾದ ಕಂಠದಿಂದ ಸದಾ ಹಾಡುತ್ತಿರಬೇಕು ಎಂದು ಹೇಳಿದ್ದಾರೆ. | |
| 32. | "ತೇಜಸ್ವಿಯಾದವನಿಗೆ ಮಾನಭಂಗಕ್ಕಿಂತ ಮರಣವೇ ಮೇಲು."<br>*ಪಾಠ* : ಕರ್ನಾಟಕ(ತ್ವ)<br>*ಲೇಖಕರು* : ಜಿ.ಪಿ. ರಾಜರತ್ನಂ<br>*ಸಂದರ್ಭ* : ಕರ್ನಾಟಕದ ಮೊದಲನೇ ಗುಣ ಅಭಿಮಾನ ಎಂದು ಕಪ್ಪೆ ಆರಭಟ್ಟನ ಶಾಸನದಲ್ಲಿ ಶಿಲಾಶಾಸನವಾಗಿ ಬರೆಯಲ್ಪಟ್ಟಿದೆ. ಇದು ತೇಜಸ್ವಿಯಾದವನಿಗೆ ಮಾನಭಂಗಕ್ಕಿಂತ 'ಮರಣವೇಮೇಲು' ಎನ್ನುವುದನ್ನು ತಿಳಿಸುತ್ತದೆ. ಇದನ್ನು ಜಿ.ಪಿ. ರಾಜರತ್ನಂರವರು ಕರ್ನಾಟಕತ್ವ ಪಾಠದಲ್ಲಿ ಹೇಳಿದ್ದಾರೆ. | |
| 33. | "ಕೇಡಾದರೆ ಮರಣದ ಚಿಂತೆ"<br>*ಪದ್ಯ* : ವಚನ<br>*ಲೇಖಕರು* : ಅಂಬಿಗರ ಚೌಡಯ್ಯ<br>*ಸಂದರ್ಭ* : ಜನರು ಶಿವಚಿಂತೆ ಬಿಟ್ಟು ಬದುಕಿನ ಚಿಂತೆಯಲ್ಲಿ ಮುಳುಗಿದವರ ಕುರಿತು ಹೇಳುವಾಗ ಈ ಮಾತು ಬಂದಿದೆ. ಜೀವನದಲ್ಲಿ ಕೆಡುಕುಂಟಾಗಿ ಮರಣವೇ ಸಂಭವಿಸಬಹುದೇ ಎಂದು ಚಿಂತಿಸುತ್ತಿರುತ್ತಾರೆ ಎಂದು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಕವಿಗಳ ಕಾಲ, ಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಕಾಲ, ಸ್ಥಳಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 34. | ಬಿ.ಆರ್. ಲಕ್ಷ್ಮಣರಾವ್<br>ಕಾಲ : ೯–೯–೧೯೪೬<br>ಜನ್ಮಸ್ಥಳ : ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ<br>ಕೃತಿ : ಗೋಪಿ ಮತ್ತು ಗಾಂಡಲೀನ, ಟುವಟಾರ ಶಾಂಗ್ರಿ–ಲಾ, ಭಾರತ ಬಿಂದು ರಶ್ಮಿ, ಸುಬ್ಬಾಭಟ್ಟರ ಮಗಳೇ (ಸಂಗ್ರಹ) | |
| 35. | ಜಿ.ಪಿ. ರಾಜರತ್ನಂ<br>ಕಾಲ : ೫–೧೨–೧೯೦೮<br>ಜನ್ಮಸ್ಥಳ : ರಾಮನಗರ ಜಿಲ್ಲೆಯ ರಾಮನಗರ<br>ಕೃತಿ : ರತ್ನನ ಪದಗಳು, ನಾಗನ ಪದಗಳು, ಗೌತಮ ಬುದ್ಧ ಏಸುಕ್ರಿಸ್ತ, ಗಂಡುಗೊಡಲಿ. | |
| | **ಪದ್ಯಭಾಗ ಪೂರ್ಣ ಮಾಡುವುದು :** | 1 × 3 = 3 |
| 36. | ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ.<br>**ಅಥವಾ**<br>ಕರ್ನಾಟಕ ವಂಗ ಆಂಧ್ರ<br>ಭಾರತೀಯ ರೊಂದೆ<br>ಪೂರ್ವೋತ್ತರ ಪಡುತೆಂಕಣ<br>ಗಾಳಿ ಮುಗಿಲು ಒಂದೆ. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| 37. | ಶಿವಾಜಿಯ ಸೈನಿಕರು ಸುತ್ತ ಮುತ್ತಲಿನ ಹಸು ಎಮ್ಮೆಗಳನ್ನು ಅಪಹರಿಸಿಕೊಂಡು ಹೋಗಿ ಕಿರುಕುಳ ಕೊಡುತ್ತಿದ್ದರು. ಇದನ್ನು ಕೇಳಿ ಕಿಡಿಕಿಡಿಯಾದ ಬೆಳವಡಿಯ ಈಶ ಪ್ರಭುಗಳಿಗೆ ಸಮಾಧಾನ ಹೇಳಿ 2000 ಸ್ತ್ರೀಯರುಳ್ಳ ಸೈನ್ಯದೊಂದಿಗೆ ಮಲ್ಲಮ್ಮಾಜಿ ಹೋದಳು. ಅಪಹಾಸ್ಯ ಮಾಡಿದ ಸೈನಿಕರನ್ನು ಕಾಳಿಯಂತೆ ಕೊಚ್ಚಿಹಾಕಿದ ಮಲ್ಲಮ್ಮಾಜಿಯನ್ನು ಕಂಡು ಜಾನುವಾರುಗಳನ್ನು ಹಿಂತಿರುಗಿಸಿದರು. ಸಂತಸದ ವಿಜಯೋತ್ಸವದೊಂದಿಗೆ ಗಂಡನಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತಿಳಿಸಲು ಹೋದಾಗ ಕೋಟೆಗೆ ಮುತ್ತಿಗೆ ಹಾಕಿದ 10,000 ಮರಾಠ ಸೈನಿಕರು ಗಂಡ ಈಶಪ್ರಭುವನ್ನು ತೀವ್ರವಾಗಿ ಗಾಯಗೊಳಿಸಿದ್ದರು. ಇದರಿಂದಾಗಿ ಬೆಳವಡಿ ಮಲ್ಲಮ್ಮಾಜಿ ತೀವ್ರ ಆಘಾತಕ್ಕೊಳಗಾದಳು.<br>**ಅಥವಾ**<br>ಬೆಳಗಾವಿ ಜಿಲ್ಲೆಯ ಕಿತ್ತೂರು ಚೆನ್ನಮ್ಮ ಬಲಾಢ್ಯ ಬ್ರಿಟಿಷರನ್ನು ಸೋಲಿಸಿದಳು. ಸೆರೆಯಾಳಾದ ಮಹಿಳೆ ಮತ್ತು ಮಕ್ಕಳಿಗೆ ಕರುಣಾಮಯಿಯಾಗಿದ್ದ ಚೆನ್ನಮ್ಮಳನ್ನು ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿದ ವೈರಿಗಳು ಗುಂಡಿನ ಮದ್ದಿನಲ್ಲಿ ಸೆಗಣಿ ಸೇರಿಸಿ ತೋಪು ಹಾರದಂತೆ ಮಾಡಿ ಮೋಸದಿಂದ ಸೆರೆಹಿಡಿದರು. ಸೆರೆಮನೆಯಲ್ಲಿಯೂ ಸ್ವಾತಂತ್ರ್ಯದ ಕನಸನ್ನೇ ಕಂಡ ವೀರರಾಣಿ ಸೆರೆಮನೆಗೆ ಬಂದ ಸಂಗೊಳ್ಳಿ ರಾಯಣ್ಣ "ತಾಯಿ" ಎಂದು ಕರೆದಾಗ "ಕನ್ನಡದ ಕಂದ ಯಾರು ?" ಎಂದು ಕೇಳಿದ ಕೆಚ್ಚಿನ ರಾಣಿ "ನಿಮ್ಮ ಧಮನಿ ಧಮನಿಗಳಲ್ಲಿ ರಕ್ತದ ಕಣಗಳಿರುವ ತನಕ ಹೋರಾಡಿ" ಎಂದು ಹುರಿದುಂಬಿಸುತ್ತಾ ವೈರಿಗಳು ನಡೆಸಿದ ಪಿತೂರಿಯ ವಿರುದ್ಧ ಹೋರಾಡಿದ್ದಾಳೆ. | |
| 38. | ವಚನಕಾರ ಅಂಬಿಗರ ಚೌಡಯ್ಯ ಲೋಕದ ಜನ ಶಿವ ಚಿಂತನೆಯನ್ನು ಬಿಟ್ಟು, ಬದುಕಿನ ಚಿಂತೆಯಲ್ಲಿ ಮುಳುಗಿ ಹೋಗಿರುವ ಪರಿಯನ್ನು ವಿವರಿಸಿದ್ದಾರೆ. ಬಡತನದಲ್ಲಿರುವ ಮನುಷ್ಯ ಉಣ್ಣುವ ಚಿಂತೆ ಮಾಡುತ್ತಾನೆ. ಪರಿಹಾರವಾದಾಗ ಉಡುವ ಚಿಂತೆ, ಸಂಪಾದಿಸಿದುದನ್ನು ಕೂಡಿಡುವ ಚಿಂತೆ, ನಂತರ ಮದುವೆ ಮಕ್ಕಳ ಚಿಂತೆ, ಎಲ್ಲಾ ಚಿಂತೆ ಪರಿಹಾರವಾದರೂ ಮತ್ತೆ ಮತ್ತೆ ಚಿಂತೆ ಆವರಿಸುತ್ತದೆ. ಜೀವನದಲ್ಲಿ ಕೇಡಾಗಿ ಮರಣ ಸಂಭವಿಸುವ ಚಿಂತೆ. ಅಂಬಿಗರ ಚೌಡಯ್ಯ ಇಂತಹಾ ಲೋಕದ ಜನರನ್ನು ಶಿವನೆಡೆಗೆ ತಿರುಗಿಸಿ ಶಿವಚಿಂತನೆ ಅಂದರೆ ಒಳ್ಳೆಯ ಚಿಂತನೆಯಲ್ಲಿ ತೊಡಗಿಸುವ ಪ್ರಯತ್ನವನ್ನು ವಚನದ ಮೂಲಕ ಮಾಡಿದ್ದಾನೆ.<br>**ಅಥವಾ**<br>ಶಿವನ ಚಿಂತೆಯಲ್ಲಿ ಇಲ್ಲದವರ ಮನಸ್ಸಿನಲ್ಲಿ ನಾನಾ ರೀತಿಯ ಚಿಂತೆಗಳು ಹುಟ್ಟಿಕೊಳ್ಳುತ್ತವೆ. ಮನುಷ್ಯನು ತನ್ನ ಬಗ್ಗೆಯೇ ಸದಾ ಚಿಂತಿಸುತ್ತಾನೆ. ಪ್ರಾರಂಭದಲ್ಲಿ ತನ್ನ ಪ್ರಾಥಮಿಕ ಅವಶ್ಯಕತೆಗಳಾದ ಊಟ, ವಸ್ತ್ರ, ವಸತಿ ಇವುಗಳ ಚಿಂತೆಯಲ್ಲಿ ತೊಳಲಿ ಪರಿಹಾರ ಕಂಡುಕೊಂಡರೂ ಚಿಂತೆ ದೂರಾಗುವುದಿಲ್ಲ. ಹೆಂಡತಿ, ಮಕ್ಕಳು ಸಂಸಾರದ ಬಗ್ಗೆಯೇ ಚಿಂತಿಸುವನೇ ವಿನಃ ಇವುಗಳನ್ನೆಲ್ಲ ನೀಡಿದ ಶಿವನ ಬಗ್ಗೆ ತಾನು ಮರೆತಿರುತ್ತಾನೆ. ಶಿವನ ಚಿಂತೆಯಲ್ಲಿ ಇಲ್ಲದವರ ಮನಸ್ಸು ಸದಾ ಚಿಂತೆಯ ಗೂಡಾಗಿರುತ್ತದೆ. ಆದುದರಿಂದ ಚಿಂತೆಯನ್ನು ಬಿಡಿ. ಶಿವನ ಚಿಂತನೆ ನಡೆಸಿರಿ ಎಂದು ಅಂಬಿಗರ ಚೌಡಯ್ಯ ವಚನದ ಮೂಲಕ ಎಚ್ಚರಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 39. | (ಎ) ಟ್ರಾಫಿಕ್ | |
| 40. | (ಸಿ) ಪ್ರಶ್ನಾರ್ಥಕ | |
| 41. | (ಬಿ) ಅನುಕರಣಾವ್ಯಯ | |
| 42. | (ಸಿ) ಭೂಮಿ | |
| 43. | (ಬಿ) ಅನ್ನು | |
| 44. | (ಬಿ) ಗಾಯಕಿ | |
| 45. | (ಎ) ಉಪಮಾಲಂಕಾರ | |
| 46. | (ಬಿ) ಅಧರ್ಮ | |
| 47. | (ಸಿ) ಕಳಸ | |
| 48. | (ಡಿ) 49 | |
| 49. | (ಎ) ದೀಪಾಲಂಕಾರ | |
| 50. | (ಡಿ) ಅಮ್ಮ | |
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 51. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ, ವಿವರಣೆ | 1 ಅಂಕ |
| | ಭಾಷಾಶೈಲಿ – ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ಇಂದ, ಗೆ, ವಿಳಾಸ ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 53. | ಪ್ರಬಂಧ ಬರೆವಣಿಗೆ : | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 54. | **ಗದ್ಯ ಭಾಗ ಓದಿ ಉತ್ತರಿಸುವುದು :** | 1 × 4 = 4 |
| | ಅ) ಜಾತೀಯತೆ, ಗ್ರಾಮೀಣ ಜೀವನ, ಬಡತನ ಮತ್ತು ಮೌಢ್ಯಗಳಿಂದ ಮೇಲುಕೀಳೆಂಬ ಭಾವನೆ ಬೆಳೆದಿದೆ. | |
| | ಆ) ಮೇಲು ಕೀಳು ಭಾವನೆ ಹೋಗಲಾಡಿಸಲು ಹೋರಾಟಗಳು ನಡೆಯುತ್ತಿವೆ. | |
| | ಇ) ಕರುಣೆ, ಸಮಾನತೆ ಮತ್ತು ಅಹಿಂಸೆಗಳೆಂಬ ಮೌಲ್ಯಗಳಿಂದ ಜನರಲ್ಲಿ ದೇವರನ್ನು ಕಾಣಬೇಕಾಗಿದೆ. | |
| | ಈ) ಅಂತರಂಗದ ಹೊಂದಾಣಿಕೆಯಿಂದ ಸಮಾನತೆ ಮತ್ತು ಸಾಮರಸ್ಯ ಸಾಧಿಸಬಹುದು. | |